Akashvani : Bengaluru
National Bulletin In Kannada
28.08.2025 : 1310hrs

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

28.08.2025 : 1310hrs

*******

**ಮುಖ್ಯಾಂಶಗಳು**

1. ಪ್ರಧಾನಿ ನರೇಂದ್ರ ಮೋದಿ ಇಂದು ಸಂಜೆ ಜಪಾನ್‌ಗೆ ಭೇಟಿ ; ರಕ್ಷಣೆ, ಭದ್ರತೆ, ತಂತ್ರಜ್ಞಾನ ಸೇರಿ ಹಲವು ವಿಷಯಗಳ ಕುರಿತು ಚರ್ಚೆ ಸಾಧ್ಯತೆ
2. ಕಚ್ಚಾ ಹತ್ತಿಯ ಮೇಲಿನ ಆಮದು ಸುಂಕ ವಿನಾಯಿತಿ ೨೦೨೫ರ ಸೆಪ್ಟೆಂಬರ್ ೩೦ರಿಂದ ಡಿಸೆಂಬರ್ ೩೧ರವರೆಗೆ ವಿಸ್ತರಣೆ
3. ಪ್ರಧಾನಮಂತ್ರಿ ಜನ್‌ಧನ್ ಯೋಜನೆ ಜಾರಿಗೆ ಇಂದಿಗೆ ೧೧ ವರ್ಷ ; ದೇಶದ ಎಲ್ಲಾ ಮನೆಗಳಿಗೆ ಬ್ಯಾಂಕಿಂಗ್ ಸೇವೆ ಕಲ್ಪಿಸುವ ಗುರಿ
4. ಯುಎಸ್ ಓಪನ್ ಟೆನಿಸ್ ಟೂರ್ನಿ ; ಮೂರನೇ ಸುತ್ತಿಗೆ ಅಲ್ಕರಾಜ್, ಸಬಲೆಂಕಾ ಮುನ್ನಡೆ

*******

೧೫ನೇ ಭಾರತ-ಜಪಾನ್ ವಾರ್ಷಿಕ ಶೃಂಗಸಭೆಯಲ್ಲಿ ಭಾಗವಹಿಸುವ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಸಂಜೆ ಜಪಾನ್‌ಗೆ ಭೇಟಿ ನೀಡಲಿದ್ದಾರೆ. ಇದು ಜಪಾನ್‌ಗೆ ಪ್ರಧಾನಿ ನರೇಂದ್ರ ಮೋದಿಯವರ ಎಂಟನೇ ಭೇಟಿಯಾಗಿದ್ದು, ಪ್ರಧಾನಿ ಶಿಗೆರು ಇಶಿಬಾ ಅವರೊಂದಿಗಿನ ಮೊದಲ ಶೃಂಗಸಭೆಯಾಗಿದೆ.ಭೇಟಿಯ ಸಮಯದಲ್ಲಿ, ಉಭಯ ಪ್ರಧಾನಿಗಳು ರಕ್ಷಣೆ ಮತ್ತು ಭದ್ರತೆ, ವ್ಯಾಪಾರ ಮತ್ತು ಆರ್ಥಿಕತೆ, ತಂತ್ರಜ್ಞಾನ ಮತ್ತು ನಾವೀನ್ಯತೆ ಮತ್ತು ಜನರ ನಡುವಿನ ವಿನಿಮಯ ಸೇರಿದಂತೆ ಭಾರತ ಮತ್ತು ಜಪಾನ್ ನಡುವಿನ ವಿಶೇಷ ಕಾರ್ಯತಂತ್ರದ ಮತ್ತು ಜಾಗತಿಕ ಪಾಲುದಾರಿಕೆಯನ್ನು ಪರಿಶೀಲಿಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಇದೇ ವೇಳೆ, ಅವರು ಪ್ರಾದೇಶಿಕ ಮತ್ತು ಜಾಗತಿಕ ಪ್ರಾಮುಖ್ಯತೆಯ ವಿಷಯಗಳ ಬಗ್ಗೆಯೂ ಚರ್ಚಿಸಲಿದ್ದಾರೆ ಎಂದು ಮಾಹಿತಿ ನೀಡಿದೆ.ಈ ಭೇಟಿಯು ಉಭಯ

ದೇಶಗಳ ನಡುವಿನ ದೀರ್ಘಕಾಲದ ವಿಶೇಷ ಸ್ನೇಹ ಬಂಧವನ್ನು ಪುನರುಚ್ಚರಿಸುತ್ತದೆ.ತಮ್ಮ ಭೇಟಿಯ ಎರಡನೇ ಚರಣದಲ್ಲಿ, ಚೈನಾದ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಅವರ ಆಹ್ವಾನದ ಮೇರೆಗೆ ಟಿಯಾಂಜಿನ್ ನಲ್ಲಿ ನಡೆಯಲಿರುವ ಶಾಂಘೈ ಸಹಕಾರ ಸಂಘಟನೆಯ ಶೃಂಗಸಭೆಯಲ್ಲಿ ಭಾಗವಹಿಸಲು ಪ್ರಧಾನಮಂತ್ರಿ ಅವರು ಇದೇ ೩೧ ರಿಂದ ಸೆಪ್ಟೆಂಬರ್ ೧ ರವರೆಗೆ ಚೈನಾಕ್ಕೆ ಪ್ರಯಾಣಿಸಲಿದ್ದಾರೆ.ಶೃಂಗಸಭೆಯ ಹೊರತಾಗಿ, ಶೃಂಗಸಭೆಯಲ್ಲಿ ಭಾಗವಹಿಸುವ ಹಲವಾರು ನಾಯಕರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ದ್ವಿಪಕ್ಷೀಯ ಸಭೆಗಳನ್ನು ನಡೆಸುವ ನಿರೀಕ್ಷೆಯಿದೆ. ೨೦೧೭ರಿಂದ ಭಾರತ ಎಸ್ ಸಿಒ ಸದಸ್ಯ ರಾಷ್ಟ್ರವಾಗಿದೆ. ಇದು ೨೦೨೨-೨೩ರ ಅವಧಿಯಲ್ಲಿ ಎಸ್ ಸಿಒ ರಾಷ್ಟ್ರಗಳ ಮುಖ್ಯಸ್ಥರ ಮಂಡಳಿಯ ಅಧ್ಯಕ್ಷ ಸ್ಥಾನವನ್ನು ಹೊಂದಿತ್ತು.

*******

ಕಚ್ಚಾ ಹತ್ತಿಯ ಮೇಲಿನ ಆಮದು ಸುಂಕ ವಿನಾಯಿತಿಯನ್ನು ೨೦೨೫ ರ ಸೆಪ್ಟೆಂಬರ್ ೩೦ ರಿಂದ ಡಿಸೆಂಬರ್ ೩೧ ರವರೆಗೆ ವಿಸ್ತರಿಸಲು ಸರ್ಕಾರ ನಿರ್ಧರಿಸಿದೆ. ಭಾರತೀಯ ಜವಳಿ ಕ್ಷೇತ್ರಕ್ಕೆ ಹತ್ತಿಯ ಲಭ್ಯತೆಯನ್ನು ಹೆಚ್ಚಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಹಣಕಾಸು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಈ ಹಿಂದೆ ಆಗಸ್ಟ್ ೧೯ ರಿಂದ ಸೆಪ್ಟೆಂಬರ್ ೩೦ ರವರೆಗೆ ಹತ್ತಿಯ ಮೇಲಿನ ಆಮದು ಸುಂಕವನ್ನು ಸರ್ಕಾರ ತಾತ್ಕಾಲಿಕವಾಗಿ ವಿನಾಯಿತಿ ನೀಡಿತ್ತು.

*******

ಪ್ರಧಾನ ಮಂತ್ರಿ ಜನ್‌ಧನ್ ಯೋಜನೆ ಇಂದಿಗೆ ೧೧ ವರ್ಷಗಳನ್ನು ಪೂರೈಸುತ್ತದೆ. ಇದು ವಿಶ್ವದ ಅತಿದೊಡ್ಡ ಹಣಕಾಸು ಸೇರ್ಪಡೆ ಉಪಕ್ರಮಗಳಲ್ಲಿ ಒಂದಾಗಿದೆ. ಇದನ್ನು ಪ್ರಧಾನಿ ನರೇಂದ್ರ ಮೋದಿ ಅವರು, ೨೦೧೪ರ ಆಗಸ್ಟ್ ೧೫ರಂದು ಕೆಂಪು ಕೋಟೆಯಿಂದ ಘೋಷಿಸಿದ್ದರು. ೨೦೧೪ರ ಆಗಸ್ಟ್ ೨೮ರಂದು ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ, ಪ್ರಧಾನ ಮಂತ್ರಿ ಈ ಸಂದರ್ಭವನ್ನು ಬಡವರ ವಿಮೋಚನೆಯನ್ನು ಆಚರಿಸುವ ಹಬ್ಬ ಎಂದು ಬಣ್ಣಿಸಿದ್ದರು. ಪ್ರಧಾನ ಮಂತ್ರಿ ಜನಧನ್ ಯೋಜನೆಯು ಆರ್ಥಿಕ ಸೇರ್ಪಡೆಯ ರಾಷ್ಟ್ರೀಯ ಯೋಜನೆಯಾಗಿದ್ದು, ಇದು ಸಮಗ್ರ ಆರ್ಥಿಕ ಸೇರ್ಪಡೆಯನ್ನು ತರಲು ಮತ್ತು ದೇಶದ ಎಲ್ಲಾ ಮನೆಗಳಿಗೆ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲು ಸಮಗ್ರ ವಿಧಾನವನ್ನು ಹೊಂದಿದೆ. ಈ ಯೋಜನೆಯು ಮೂಲ ಉಳಿತಾಯ ಬ್ಯಾಂಕ್ ಖಾತೆಯ

ಲಭ್ಯತೆ, ಅಗತ್ಯ ಆಧಾರಿತ ಸಾಲಕ್ಕೆ ಅವಕಾಶ, ಹಣ ರವಾನೆ ಸೌಲಭ್ಯ, ವಿಮೆ ಮತ್ತು ಪಿಂಚಣಿಯಂತಹ ವಿವಿಧ ಹಣಕಾಸು ಸೇವೆಗಳಿಗೆ ಲಭ್ಯತೆಯನ್ನು ಖಚಿತಪಡಿಸುತ್ತದೆ. ಪ್ರಧಾನ ಮಂತ್ರಿ ಜನಧನ್ ಯೋಜನೆಯು ಪ್ರತಿ ಮನೆಗೆ ಕನಿಷ್ಠ ಒಂದು ಮೂಲ ಬ್ಯಾಂಕಿಂಗ್ ಖಾತೆಯೊಂದಿಗೆ ಬ್ಯಾಂಕಿಂಗ್ ಸೌಲಭ್ಯಗಳಿಗೆ ಸಾರ್ವತ್ರಿಕ ಪ್ರವೇಶ, ಆರ್ಥಿಕ ಸಾಕ್ಷರತೆ ಮತ್ತು ಕ್ರೆಡಿಟ್, ವಿಮೆ ಮತ್ತು ಪಿಂಚಣಿ ಸೌಲಭ್ಯಕ್ಕೆ ಅವಕಾಶವನ್ನು ಒದಗಿಸುತ್ತದೆ. ಇದು ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು ಒಳಗೊಳ್ಳುತ್ತದೆ ಮತ್ತು ಖಾತೆ ತೆರೆಯುವವರಿಗೆ ಸ್ಥಳೀಯ ಡೆಬಿಟ್ ಕಾರ್ಡ್ ಸೇವೆ ಒದಗಿಸಲಿದೆ. ಯಾವುದೇ ಬ್ಯಾಂಕ್ ಶಾಖೆ ಅಥವಾ ಬಿಸಿನೆಸ್ ಕರೆಸ್ಪಾಂಡೆಂಟ್ ಶಾಖೆಗಳು ಶೂನ್ಯ ಬ್ಯಾಲೆನ್ಸ್‌ನಲ್ಲಿ ಖಾತೆಯನ್ನು ತೆರೆಯಬಹುದು. ಪ್ರತಿಯೊಂದು ಬ್ಯಾಂಕ್ ಖಾತೆಯು ಬ್ಯಾಂಕುಗಳ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿರಲಿದೆ. ಮೂಲಭೂತ ವೈಶಿ? ಫೋನ್‌ಗಳಲ್ಲಿಯೂ ಲಭ್ಯವಿರುವ ಯುಎಸ್ಎಸ್‌ಡಿ ಸೌಲಭ್ಯವನ್ನು ಬಳಸಿಕೊಂಡು ಮೊಬೈಲ್ ಬ್ಯಾಂಕಿಂಗ್ ಅನ್ನು ಸಹ ಇದು ಬೆಂಬಲಿಸಲಾಗುತ್ತಿದೆ.

*******

ಗಣೇಶ ಚತುರ್ಥಿಯ ಉತ್ಸವ ದೇಶಾದ್ಯಂತ ಮುಂದುವರಿದಿದೆ. ಗಣೇಶ ಹಬ್ಬದ ಆಚರಣೆಗಳು ಮಹಾರಾಷ್ಟ್ರದಾದ್ಯಂತ ಬಹಳ ಉತ್ಸಾಹದಿಂದ ನಡೆಯುತ್ತಿವೆ. ರಾಜಭವನದಲ್ಲಿ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರು ನಾಸಿಕ್ ಕೇಂದ್ರ ಕಾರಾಗೃಹದ ಕೈದಿಗಳು ರಚಿಸಿದ ಪರಿಸರ ಸ್ನೇಹಿ ವಿಗ್ರಹದ ಪ್ರಾಣಪ್ರತಿಷ್ಠಾ ಮತ್ತು ಆರತಿಯನ್ನು ನೆರವೇರಿಸಿದರು. ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರು ಮುಂಬೈನ ತಮ್ಮ ಅಧಿಕೃತ ನಿವಾಸ ವರ್ಷಾದಲ್ಲಿ ಗಣೇಶನನ್ನು ಸ್ವಾಗತಿಸಿದರು. ನಿನ್ನೆಯಿಂದ ೧೧ ದಿನಗಳವರೆಗೂ ಗಣೇಶ ಉತ್ಸವ ನೆರವೇರಲಿದೆ.

*******

ಥಾಯ್ಲೆಂಡ್ ನಲ್ಲಿ ನಡೆಯುತ್ತಿರುವ ವಾರ್ಷಿಕ ಸೇನಾ ಮುಖ್ಯಸ್ಥರ ಸಮ್ಮೇಳನದ ಹೊರತಾಗಿ, ಭಾರತದ ಸಮಗ್ರ ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಏರ್ ಮಾರ್ಷಲ್ ಅಶುತೋಷ್ ದೀಕ್ಷಿತ್ ಅವರು ವಿಯೆಟ್ನಾಂ, ದಕ್ಷಿಣ ಕೊರಿಯಾ ಮತ್ತು ಯುನೈಟೆಡ್ ಕಿಂಗ್ ಡಮ್‌ನ ಹಿರಿಯ ರಕ್ಷಣಾ ಅಧಿಕಾರಿಗಳೊಂದಿಗೆ ಸರಣಿ ಸಭೆಗಳನ್ನು ನಡೆಸಿದ್ದಾರೆ. ಏರ್ ಮಾರ್ಷಲ್ ದೀಕ್ಷಿತ್ ಅವರು,

ವಿಯೆಟ್ನಾಂ ಪೀಪಲ್ಸ್ ಆರ್ಮಿಯ ಜನರಲ್ ಸ್ಟಾಫ್‌ನ ಉಪಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಥಾಯ್ ದೈ ಎನ್ಗೊಕ್ ಅವರನ್ನು ಭೇಟಿಯಾದರು. ಕೊರಿಯಾ ಗಣರಾಜ್ಯದ ಸಶಸ್ತ್ರ ಪಡೆಗಳ ಜಂಟಿ ಮುಖ್ಯಸ್ಥ ವೈಸ್ ಅಡ್ಮಿರಲ್ ಕಾಂಗ್ ಡಾಂಗ್ ಗಿಲ್, ಮತ್ತು ಯುನೈಟೆಡ್ ಕಿಂಗ್ ಡಮ್‌ನ ರಾಯಲ್ ನೇವಿಯ ಮುಖ್ಯಸ್ಥ ನೌಕಾ ಸಿಬ್ಬಂದಿಯ ಜನರಲ್ ಸರ್ ಗ್ವಿನ್ ಜೆಂಕಿನ್ಸ್ ಅವರನ್ನು ಭೇಟಿಯಾಗಿ ರಕ್ಷಣಾ ಬಲವರ್ಧನೆ ಕುರಿತಂತೆ ಚರ್ಚಿಸಿದರು. ರಕ್ಷಣಾ ಸಹಕಾರವನ್ನು ವಿಸ್ತರಿಸುವುದು, ಕಡಲ ಸಹಯೋಗವನ್ನು ಮುನ್ನಡೆಸುವುದು, ವೃತ್ತಿಪರ ಮಿಲಿಟರಿ ವಿನಿಮಯವನ್ನು ಆಳಗೊಳಿಸುವುದು ಮತ್ತು ತಂತ್ರಜ್ಞಾನ ಸೇರಿದಂತೆ ಸಹಭಾಗಿತ್ವದ ಹೊಸ ಕ್ಷೇತ್ರಗಳನ್ನು ಅನ್ವೇಷಿಸುವ ಚರ್ಚೆಯ ಭಾಗವಾಗಿತ್ತು ಎಂದು ಐಡಿಎಸ್ ಕೇಂದ್ರಕೇಚರಿ ತಿಳಿಸಿದೆ.

*******

ದೇಶದ ೭ ರಾಜ್ಯಗಳಲ್ಲಿ ಇಂದು ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಒಡಿಶಾ, ಛತ್ತಿಸ್‌ಗಢ, ಆಂಧ್ರಪ್ರದೇಶ, ಕರಾವಳಿ, ತೆಲಂಗಾಣ, ಮಧ್ಯ ಮಹಾರಾಷ್ಟ್ರ, ಕೇರಳ, ಕರಾವಳಿ ಕರ್ನಾಟಕಗಳಲ್ಲಿ ಭಾರೀ ಮಳೆ ಬಿಳಲಿದೆ. ಮುಂದಿನ ೭ ದಿನಗಳ ಕಾಲ ವಾಯುವ್ಯ ಭಾರತದಲ್ಲಿ ಭಾರೀ ಮಳೆ ಮುಂದುವರೆಯಲಿದೆ. ಜಮ್ಮುವಿನ ಕೆಲ ಪ್ರದೇಶಗಳಲ್ಲಿ ಕಳೆದ ೨೪ ತಾಸುಗಳಲ್ಲಿ ೭೦ ವರ್ಷಗಳ ಬಳಿಕ ಅತ್ಯಧಿಕ ಮಳೆಯಾಗಿದೆ ಎಂದು ವರದಿಯಾಗಿದೆ.

*******

ಆಕಾಶವಾಣಿಯ ಮನ್ ಕಿ ಬಾತ್ ಕಾರ್ಯಕ್ರಮದ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇದೇ ೩೧ ರಂದು ಬೆಳಿಗ್ಗೆ ೧೧ ಗಂಟೆಗೆ ದೇಶ, ವಿದೇಶಗಳ ಭಾರತೀಯರೊಂದಿಗೆ ತಮ್ಮ ಮನದ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನ್ ಕಿ ಬಾತ್‌ನ ೧೨೫ನೇ ಆವೃತ್ತಿಯಾಗಿದೆ. ಜನತೆ ತಮ್ಮ ಸಲಹೆಗಳು ಹಾಗೂ ಅಭಿಪ್ರಾಯಗಳನ್ನು, ನಾಳೆ ಅಂದರೆ ೨೯ರೊಳಗೆ ನಮೋ ಆಪ್. ಒಥಿ ಉov.iಟಿ ಜಾಲತಾಣ ಅಥವಾ ಟೋಲ್ ಫ್ರೀ ಸಂಖ್ಯೆ ೧೮೦೦-೧೧-೭೮೦೦ ಗೆ ಕರೆ ಮಾಡಿ ತಮ್ಮ ಸಂದೇಶವನ್ನು ಹಂಚಿಕೊಳ್ಳಬಹುದು.

*******

ಪ್ರಧಾನಿ ನರೇಂದ್ರ ಮೋದಿ ಅವರು ಫಿನ್ ಲ್ಯಾಂಡ್ ಅಧ್ಯಕ್ಷ ಅಲೆಕ್ಸಾಂಡರ್ ಸ್ಟಬ್ ಅವರೊಂದಿಗೆ ನಿನ್ನೆ ದೂರವಾಣಿ ಸಂಭಾಷಣೆ ನಡೆಸಿದರು. ಫಿನ್ಲೆಂಡ್  ಯುರೋಪಿಯನ್ ಒಕ್ಕೂಟದಲ್ಲಿ ಮೌಲ್ಯಯುತ ಪಾಲುದಾರ ಎಂದು ಪ್ರಧಾನಿ ಸಾಮಾಜಿಕ ಮಾಧ್ಯಮ ಪೋಸ್ಟ್ ನಲ್ಲಿ ತಿಳಿಸಿದ್ದಾರೆ. ವ್ಯಾಪಾರ, ತಂತ್ರಜ್ಞಾನ ಮತ್ತು ಸುಸ್ಥಿರತೆಯಂತಹ ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರವನ್ನು ಬಲಪಡಿಸುವ ಮಾರ್ಗಗಳ ಬಗ್ಗೆ ಉಭಯ ನಾಯಕರು ಚರ್ಚಿಸಿದರು. ಉಕ್ರೇನ್‌ನಲ್ಲಿನ ಸಂಘರ್ಷದ ಶಾಂತಿಯುತ ಪರಿಹಾರಕ್ಕಾಗಿ ನಡೆಯುತ್ತಿರುವ ಪ್ರಯತ್ನಗಳ ಬಗ್ಗೆ ಅವರು ದೃಷ್ಟಿಕೋನಗಳನ್ನು ವಿನಿಮಯ ಮಾಡಿಕೊಂಡಿದ್ದಾರೆ.

*******

೨೮-೦೮-೨೦೨೫   ರಾಷ್ಟ್ರೀಯ ವಾರ್ತೆಗಳು  ೧.೧೦  ಜಮ್ಮು ಮತ್ತು ಕಾಶ್ಮೀರ - ರಕ್ಷಣಾ ಕಾರ್ಯ ಜಮ್ಮು ಪ್ರದೇಶ ಮತ್ತು ಉತ್ತರ ಪಂಜಾಬ್‌ನಲ್ಲಿ ಪ್ರವಾಹ ಪರಿಸ್ಥಿತಿಯಿಂದಾಗಿ ಹೆಚ್ಚುತ್ತಿರುವ ನೀರಿನ ಮಟ್ಟ ಮತ್ತು ವಿನಾಶಕಾರಿ ಪ್ರವಾಹಕ್ಕೆ ಪ್ರತಿಕ್ರಿಯೆಯಾಗಿ ಭಾರತೀಯ ವಾಯುಪಡೆ ವ್ಯಾಪಕ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದೆ. ಸಂತ್ರಸ್ತರ ಬೆಂಬಲಕ್ಕಾಗಿ ಭಾರತೀಯ ವಾಯುಪಡೆಯು ಹೆಲಿಕಾಪ್ಟರ್ ಫ್ಲೀಟ್, ಸಾರಿಗೆ ವಿಮಾನ ಮತ್ತು ಇತರ ಐಎಎಫ್ ಸ್ವತ್ತುಗಳನ್ನು ನಿಯೋಜಿಸಿದೆ ಎಂದು ರಕ್ಷಣಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಜಮ್ಮುವಿನ ಅಖ್ನೂರ್ ಪ್ರದೇಶ, ಪಠಾಣ್ಕೋಟ್ ಮತ್ತು ಪಂಜಾಬ್ ನ ಡೇರಾ ಬಾಬಾ ನಾನಕ್ ಪ್ರದೇಶದಲ್ಲಿ ಸಶಸ್ತ್ರ ಸಿಬ್ಬಂದಿಯ ಜೀವವನ್ನು ರಕ್ಷಿಸಲು ಮತ್ತು ನಡೆಸಿದ ರಕ್ಷಣಾ ಕಾರ್ಯಾಚರಣೆಗಳ ಬಗ್ಗೆಯೂ ಅದು ಗಮನಸೆಳೆದಿದೆ. ಪರಿಸ್ಥಿತಿ ವಿಕಸನಗೊಳ್ಳುತ್ತಿದ್ದಂತೆ ಹೆಚ್ಚಿನ ಕಾರ್ಯಾಚರಣೆಗಳನ್ನು ಕೈಗೊಳ್ಳಲು ಐಎಎಫ್ ಸಿದ್ಧವಾಗಿದೆ ಎಂದು ಸಚಿವಾಲಯ ತಿಳಿಸಿದೆ.

*******

ನ್ಯೂಯಾರ್ಕ್ ನಲ್ಲಿ ನಡೆಯುತ್ತಿರುವ ಯುಎಸ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಮಾಜಿ ನಂ.೧ ಆಟಗಾರ ನೊವಾಕ್ ಜೊಕೊವಿಚ್ ಮೂರನೇ ಸುತ್ತು ಪ್ರವೇಶಿಸಿದ್ದಾರೆ. ದ್ವಿತೀಯ ಸುತ್ತಿನಲ್ಲಿ ಸರ್ಬಿಯಾ ಆಟಗಾರ ಜೊಕೊವಿಚ್ ೬-೩, ೬-೩, ೬-೧ ನೇರ ಸೆಟ್‌ಗಳಿಂದ ಅಮೆರಿಕದ ಝಚಾರಿ ಸ್ವಜ್ದಾ ವಿರುದ್ಧ ಜಯ ಗಳಿಸಿದರು. ೭ನೇ ಶ್ರೇಯಾಂಕಿತ

ಕಾರ್ಲೋಸ್ ಅಲ್ಕರಾಜ್ ಕೂಡ ದ್ವಿತೀಯ ಸುತ್ತಿನಲ್ಲಿ ೬-೧, ೬-೦, ೬-೩ ನೇರ ಸೆಟ್‌ಗಳಿಂದ ಮಟ್ಟಿಯಾ ಬೆಲ್ಲುಸಿ ವಿರುದ್ಧ ಗೆದ್ದು ಮೂರನೇ ಸುತ್ತು ಪ್ರವೇಶಿಸಿದ್ದಾರೆ. ಮಹಿಳೆಯರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನಲ್ಲಿ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ೭-೬, ೬-೨ ಸೆಟ್‌ಗಳಿಂದ ಪೋಲಿನಾ ಕುಡರ್ಮೆಟೋವಾ ವಿರುದ್ಧ ಜಯಗಳಿಸಿ ಮುಂದಿನ ಸುತ್ತಿಗೆ ಅರ್ಹತೆ ಗಳಿಸಿದ್ದಾರೆ.

***END****